ಅಧೀರತೆಯಾವರಿಸಿತು. ಮರುಕ್ಷಣ ತಾನಿಲ್ಲಿ ಅಪರಿಚಿತಳು ಅಂತ ತೋರಿಸಿಕೊಳ್ಳಬಾರದು, ಈ ಊರು ಪರಿಚಿತವಾಗಲೇಬೇಕು ಎಂದು ಗಟ್ಟಿಮಾಡಿಕೊಳ್ಳುತ್ತಾ ಉತ್ತರಕೊಡದೆ ನೇರ ನಡೆದಳು. ಮೇಲುಸೇತುವೆಯೊಂದರ ಪಕ್ಕ ಕೆಳಗೆ ನಡೆದವಳೆದುರು ಕಂಡ ಬೋರ್ಡಲ್ಲಿ ಆನಂದರಾವ್ ವೃತ್ತ ಅಂತಿತ್ತು. ರಸ್ತೆಯಾಚೆ ಒಂದು ಲಾಡ್ಜ್ ಕಂಡಿತು. ಒಳಹೋಗಿ ರಿಸೆಪ್ಷನ್ನಿನಲ್ಲಿ ಒಂದುರೂಮು ಬೇಕು ಅಂದಳು. ಕೌಂಟರಿನಲ್ಲಿ ಕುಳಿತವ ಪರೀಕ್ಷಿಸಿದ. ಸಾಧಾರಣಗಾತ್ರದ ಸೂಟುಕೇಸು, ಸಣ್ಣಪ್ರಾಯದ ತರುಣಿ. 'ಮೇಡಮ್ ಎಷ್ಟು ಜನ?' ಕೇಳಿದ. 'ಒಬ್ಬಳೇ... ಸಿಂಗಲ್ ರೂಮು ಸಾಕು.' ಅಂದಳು. ಇಷ್ಟುರಾತ್ರಿ, ಸಂಗಡ ಯಾರೂ ಇಲ್ಲದ ತರುಣಿ. ಎಂತಹ ಕೇಸೋ ಏನೋ ಅಂದುಕೊಳ್ಳುತ್ತ ರಜಿಸ್ಟರು ನೋಡಿದಂತೆ ಮಾಡಿ, 'ಸಾರಿ ಮೇಡಂ, ಸಿಂಗಲ್ಲು ಡಬಲ್ಲು ಯಾವ ರೂಮೂ ಖಾಲಿಯಿಲ್ಲವಲ್ಲ...' ಅಂದ. ನಿರಾಸೆಯಿಂದ ಸೂಟುಕೇಸೆತ್ತಿಕೊಂಡು ರಸ್ತೆಗಿಳಿದಳು. ಮೇನೇಜರನಿಗೆ ಸಂದಿಗ್ಧ ಸುರುವಾಯಿತು. ಸುಂದರವಾಗಿರುವ ಒಂಟಿತರುಣಿ, ಈ ಸಿಟಿಯಲ್ಲಿ ಪರಿಚಿತರಿದ್ದರೆ ಹೋಟೆಲಿಗೆ ಬರುತ್ತಿರಲಿಲ್ಲ. ಈ ಅಪರಾತ್ರಿ ರಸ್ತೆಯಲ್ಲಿ ಏನಾದರು ಆಗಬಾರದ್ದಾಗಿ, ಈ ಹೋಟೆಲಲ್ಲಿ ರೂಮು ಕೊಡದೆ ಕಳಿಸಿದ್ದೂ ಸೇರಿಕೊಂಡರೆ ಅಂತೆಲ್ಲಾ ಅನಿಸಿ ಬಾಗಿಲಿಗೆ ಹೋಗಿ ಮರಳಿ ಕರೆಸಿದ. ಒಂದೇ ರೂಮಿದೆ ಆದರೆ ನಾಳೆರಾತ್ರಿ ಬೇರೆಯೋರಿಗೆ ಬುಕ್ಕಾಗಿದೆ, ಖಾಲಿಮಾಡಬೇಕು ಅಂತ ನಿಬಂಧನೆ ಹಾಕಿ ರೂಮು ಕೊಟ್ಟ. ರಜಿಸ್ಟರಲ್ಲಿ ಹೆಸರು ಸುರಭಿ ಅಂತ ಬರೆದು ಊರು ಅಂತಿದ್ದಲ್ಲಿ ಹಾಸನ ಅಂತ ಬರೆದಳು. ತಲೆಯ ಮೇಲಿನ ತಕ್ಷಣದ ಅತಂತ್ರತೆಯೊಂದು ದೂರವಾಗಿ, ಫೋನು ಸ್ವಿಚ್‌ಆಫ್ ಮಾಡಿ ಹಾಸಿಗೆಯ ಮೇಲೆ ಮಲಗಿದವಳಿಗೆ ಊಟದ ನೆನಪೂ ಇಲ್ಲ, ಗಾಢನಿದ್ದೆ. ಎಂತೆಂತದೋ ಒಂದಕ್ಕೊಂದು ಸಂಬಂಧವಿಲ್ಲದ ಸ್ವಪ್ನಗಳು.

**3**

ಬೆಳಿಗ್ಗೆ ಎಚ್ಚರವಾದಾಗ ಹೊಟ್ಟೆ ವಿಪರೀತ ಚುರುಗುಡುತ್ತಿತ್ತು. ಮುಖತೊಳೆದು ಎದುರಿನ ಹೋಟೆಲಿನಲ್ಲಿ ತಿಂಡಿಕಾಫಿ ಮುಗಿಸಿ ಬಂದಮೇಲೆ ಒಂದೊಂದೇ ಅರ್ಥವಾಗತೊಡಗಿತು. ರಾತ್ರಿಯೊಳಗೆ ರೂಮು ಬಿಡಬೇಕು; ನಂತರ ಏನು? ಅಷ್ಟಕ್ಕೂ ರಾತ್ರಿಯವರೆಗೆ ಮುಂದಿನ ಕೆಲಸ ಏನು? ಹೆಜ್ಜೆ ಇಟ್ಟಾಯ್ತು, ಈಗ ಅದೆಲ್ಲ ತಲೆಕೆಡಿಸಿಕೊಂಡರಾಗುವುದಿಲ್ಲ, ಮುನ್ನುಗ್ಗಬೇಕು ಅನಿಸಿ ಎದ್ದಳು. ಸ್ನಾನಮಾಡಿ ಬಿಗಿಯಾದ ಕಮೀಜ್ ಲೆಗ್ಗಿಂಗ್ ಧರಿಸಿ ಹದವಾಗಿ ಮೇಕಪ್ ಮಾಡಿಕೊಂಡಳು. ಅಪ್ಪ ಕೊಟ್ಟ ಎರಡುಸಾವಿರದಲ್ಲಿ ಉಳಿದ ಐನೂರರ ಸಂಗಡ ತನ್ನ ಒಂದೆಳೆ ಚೈನನ್ನು ಫೈನಾನ್ಸ್ ಕಂಪೆನಿಯಲ್ಲಿ ಅಡವಿಟ್ಟು ಪಡೆದ ಇಪ್ಪತ್ತುಸಾವಿರವಿತ್ತು. ರಸ್ತೆಗಿಳಿದವಳಿಗೆ ಏನು ಮಾಡುವುದು ತೋಚಲಿಲ್ಲ. ಹಾಗೇ ನಡೆಯುತ್ತಿದ್ದವಳಿಗೆ ಜ್ಯೂಸ್‌ಅಂಗಡಿ ನಡೆಸುತ್ತಿದ್ದ ಮಹಿಳೆ ಕಾಣಿಸಿದಳು. ಅಲ್ಲಿ ಕುಳಿತು ಮೂಸಂಬಿಜ್ಯೂಸ್ ಕೇಳಿದಳು. ತಾನೊಬ್ಬಳೇ ಗಿರಾಕಿಯಿದ್ದ ಸಮಯದಲ್ಲಿ 'ಮೇಡಂ... ಇಲ್ಲಿ ಗಾಂಧಿನಗರ ಎಲ್ಲಿ ಬರುತ್ತೆ?' ವಿಚಾರಿಸಿದಳು. 'ಇದೆಲ್ಲಾ ಗಾಂಧಿನಗರವೇ.' ಯಾಂತ್ರಿಕ ಉತ್ತರ ಬಂತು. ಪೆಚ್ಚಾಗಿ, ಥತ್... ತಾನು ಅಂಗಡಿಬೋರ್ಡಾದರೂ ನೋಡಬೇಕಿತ್ತು ಅನಿಸಿದರೂ ಉತ್ಸಾಹ ಬಂತು. ಹಣಕೊಟ್ಟು, ರಸ್ತೆಗಿಳಿದು ಅದೇ ದಿಕ್ಕಿನಲ್ಲಿ ಮುಂದುವರೆದಳು. ಜನಗಳ, ವಾಹನಗಳ ದಟ್ಟಣೆಯಿತ್ತು. ರಸ್ತೆಯೂ ಅಂತಹ ಅಗಲವಿಲ್ಲ. ರಿಕ್ಷಾದವರು, ಸಮೋಸ ಮಾರುವವರು, ಹಣ್ಣಿನಂಗಡಿಯವರು ಎಲ್ಲ ಇದ್ದರು. ನಡೆಯತ್ತ ನಡೆಯುತ್ತ ರಸ್ತೆಮುಗಿದು ಕೇಜಿ ರಸ್ತೆಗೆ ಸೇರಿತು. ವಾಪಸ್ಸು ಬಂದು ಅಡ್ಡರಸ್ತೆಗೆ ತಿರುಗಿ ನಡೆದರೆ ಮತ್ತೆ ಆನಂದರಾವ್ ವೃತ್ತ ಸಿಕ್ಕಿ ದಾಟಿ ನಡೆದವಳಿಗೆ ರೇಸ್‌ಕೋರ್ಸ್ ರಸ್ತೆ ಸಿಕ್ಕಿತು. ಎಲ್ಲಾಕಡೆ ವಾಹನಗಳು, ಜನರು, ಹೋಟೆಲು, ಅಂಗಡಿಗಳು.